ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

# HUBLI ELECTRICITY SUPPLY COMPANY LIMITED

(ಕರ್ನಾಟಕ ಸರ್ಕಾರದ ಸಂಪೂರ್ಣಸ್ವಾಮ್ಯಕ್ಕೆ ಒಳಪಟ್ಟಿದೆ)

ಸಹಾಯಕಕಾರ್ಯನಿರ್ವಾಹಕಇಂಜನೀಯರು(ವಿ)
ಕಾರ್ಯ& ಪಾಲನಾ ಉಪ ವಿಭಾಗ,
ಹು. ವಿ.ಸ.ಕಂ. ನಿ. ಕುಮಟಾರವರ ಕಛೇರಿ,
Phone No: 08386-222165, 224865

O/o,Assistant Executive Engineer (Ele),
O & M Sub Division
HESCOM, KUMTA.
Web-site : www.hescom.co.in
E-mail ID : aeekmt.hescom@gmail.com

**Corporate Identity Number (CIN): U31401KA2002SGC030437**

ಕ್ರಮಾಂಕ:ಕುಮಟಾ:ಸಕಾನಿಇ(ವಿ): 2020-21 2986-93 ದಿನಾಂಕ: / /2020 19/10/20

ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಹೆಸ್ಕಾಂ ಉಪವಿಭಾಗ ಕುಮಟಾ ಕಛೇರಿಯಲ್ಲಿ ದಿನಾಂಕ 17.10.2020 ರಂದು ಗ್ರಾಹಕರ ಸಂವಾದ ಸಭೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ಅಧ್ಯಕ್ಷತೆಯಲ್ಲಿ ನಡೆಸಲಾಯಿತು, ಸದರಿ ಸಭೆಯಲ್ಲಿ ಹಾಜರಾದ ಗ್ರಾಹಕರು ,ಕಂಪನಿಯ ಅಧಿಕಾರಿಗಳು ಹಾಗೂ ನೌಕರರು ಈ ಕೆಳಗೆ ವಿವರಿಸಲಾಗುತ್ತಿರುವ ಗ್ರಾಹಕರ ಕುಂದು ಕೊರತೆಯ ಕುರಿತು ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಠರಾಯಿಸಿರುವ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

ಗ್ರಾಹಕರು

1. ಶ್ರೀ ರಾಜರಾಮ ಜಿ ಹೆಗಡೆ, ಹೆಗಡೆ ಕುಮಟಾ
2. ಶ್ರೀ ನವೀನ ಜೆ ನಾಯ್ಕ, ಬಂಕಿಕೊಡ್ಲ, ಕುಮಟಾ
3. ಶ್ರೀ ವಿನೋದ ಎನ್ ಶೆಟ್ಟಿ, ಕುಮಟಾ
4. ಶ್ರೀ ಎಮ್ ಟಿ ನಾಯ್ಕ, ಹಂದಿಗೋಣ ಕುಮಟಾ
5. ಶ್ರೀ ಮಂಜುನಾಥ ಎಸ್ ಮುಕ್ರಿ, ಶಿರಗುಂಜಿ ಕುಮಟಾ

ಉಪ ವಿಭಾಗೀಯ ಕಛೇರಿ ಅಧಿಕಾರಿ/ನೌಕರರು

6. ಶ್ರೀ ಸಂಜೀವ ಕೆ ಗೌಡ, ಪ್ರಭಾರೆ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ) ಕಾ ಮತ್ತು ಪಾ ಉಪ ವಿಭಾಗ ಹೆಸ್ಕಾಂ, ಕುಮಟಾ
7. ಶ್ರೀ. ಲೋಹಿತ್ ಎಲ್ ನಾಯ್ಕ, ಸಹಾಯಕ ಲೆಕ್ಕಾಧಿಕಾರಿ, ಹೆಸ್ಕಾಂ ಕುಮಟಾ
8. ಶ್ರೀ. ವಿಜಯ ಎನ್ ತೋಡುರ ಸಹಾಯಕ ಇಂಜಿನೀಯರ್(ವಿ),ಶಾಖಾಧಿಕಾರಿ ಪಟ್ಟಣ ಶಾಖೆ
9. ಶ್ರೀ ರಾಜು ಬಿ ಪ್ರಭಾರೆ ಶಾಖಾಧಿಕಾರಿಗಳು, ಮರಾಕಲ್ ಶಾಖೆ
10. ಶ್ರೀ. ಮಹೇಂದ್ರ ಎಮ್ ನಾಯ್ಕ ಕಿರಿಯ ಇಂಜಿನೀಯರ್ (ವಿ) (ಕಾಮಗಾರಿ ಘಟಕ)
11. ಶ್ರೀ. ಹೆಚ್.ಎನ್.ಕುಲಕರ್ಣಿ, ಪ್ರಭಾರೆ ಶಾಖಾಧಿಕಾರಿ ಗ್ರಾಮೀಣ ಶಾಖೆ.2
12. ಶ್ರೀ ಸತೀಶ ಕೆ ಗೌಡ ಪ್ರಭಾರೆ ಶಾಖಾಧಿಕಾರಿ ಗ್ರಾಮೀಣ ಶಾಖೆ.1

ಚರ್ಚಿಸಿ ಠರಾಯಿಸಿರುವ ವಿಷಯಗಳು:

1. ಶ್ರೀ ಎಮ್.ಟಿ.ನಾಯ್ಕ ಹಂದಿಗೋಣ ಕುಮಟಾ ಇವರು ಹಂದಿಗೋಣದಲ್ಲಿ ಬೀದಿ ದೀಪ ಉರಿಯುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)ರವರು ಶಾಖಾಧಿಕಾರಿಗಳು, ಗ್ರಾಮೀಣ ಶಾಖೆ 1 ರವರಿಗೆ ವಿದ್ಯುತ್ ಲೈನ್ ಸರಿಯಾಗಿರುವ ಬಗ್ಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು

( ಶಾಖಾಧಿಕಾರಿಗಳು, ಗ್ರಾಮೀಣ ಶಾಖೆ 1 ಸದರಿ ವಿಷಯದ ಕುರಿತು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಜರುಗಿಸುವುದು.)

2. ಶ್ರೀ ರಾಜರಾಮ ಜಿ ಹೆಗಡೆ, ಹೆಗಡೆ ಕುಮಟಾ ಇವರು ವಿದ್ಯುತ್ ವಾಹಕಗಳ ಮೇಲೆ ಬಹಳಷ್ಟು ವಾಯರ್‌ಗಳ ಜೋಡಣೆಗಳಿದ್ದು ಅಪಾಯಕಾರಿ ಸ್ಥಿತಿಯಲ್ಲಿದೆ ಎಂದು ಸಭೆಯಲ್ಲಿ ವಿವರಿಸಿದರು, ಅದಕ್ಕೆ. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್(ವಿ)ರವರು ಶಾಖಾಧಿಕಾರಿಗಳು, ಗ್ರಾಮೀಣ ಶಾಖೆ 2 ರವರಿಗೆ ಸ್ಥಳ ಪರಿಶೀಲಿಸಿ ವಾಯರ್ ಬದಲಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

(ಶಾಖಾಧಿಕಾರಿಗಳು, ಗ್ರಾಮೀಣ ಶಾಖೆ 2 ಸದರಿ ವಿಷಯದ ಕುರಿತು ಸ್ಥಳ ಪರಿಶೀಲಿಸಿ ಅಂದಾಜು ಪತ್ರಿಕೆ ಸಲ್ಲಿಸಲು ಕ್ರಮ ಜರುಗಿಸುವುದು.)

3. SRGL37047 ರ ಗ್ರಾಹಕರಾದ ಮಂಜುನಾಥ ಎಸ್ ಮುಕ್ರಿ ಪ್ರಥಮ ವಿದ್ಯುತ್ ಬಿಲ್ ನೀಡದೇ ಇರುವ ಕುರಿತು ಸಭೆಯಲ್ಲಿ ಪ್ರಸ್ತಾಪಿಸಿದರು. ಅದಕ್ಕೆ ಸಹಾಯಕ ಲೆಕ್ಕಾಧಿಕಾರಿಗಳು ಕಂಪ್ಯೂಟರ್‌ನಲ್ಲಿ ಪರಿಶೀಲಿಸಿ ವಿದ್ಯುತ್ ಬಿಲ್ ನೀಡಿರುವ ಕುರಿತು ಗ್ರಾಹಕರಿಗೆ ತಿಳಿಸಿದರು. ಗ್ರಾಹಕರು ಅಲ್ಲಿ ವಾಸ ಇರದೇ ಇರುವುದರಿಂದ ಬಿಲ್ ದೊರಕಿರುವುದಿಲ್ಲಾ ಎಂದು ಗ್ರಾಹಕರಿಗೆ ಸೂಕ್ತ ವಿವರಣೆಯನ್ನು ತಿಳಿಸಿ ಹೇಳಿದರು.

ಅಂತಿಮವಾಗಿ ಗ್ರಾಹಕರಿಗೆ ವಂದನೆಗಳನ್ನು ಅರ್ಪಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರು(ವಿ)
ಕಾರ್ಯ ಮತ್ತು ಪಾಲನಾ ಉಪವಿಭಾಗ
ಹು.ವಿ.ಸ.ಕಂ.ನಿ.ಕುಮಟಾ

<u>ಪ್ರತಿಯನ್ನು</u>

1. ಅಧೀಕ್ಷಕ ಇಂಜಿನೀಯರ್(ವಿ)ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ, ಹೆಸ್ಕಾಂ, ಅಯ್ಯಪ್ಪ ನಗರ, ಸಿರ್ಸಿ ರವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ಕಾರ್ಯ ಮತ್ತು ಪಾಲನಾ ವಿಭಾಗ ಹೆಸ್ಕಾಂ,ಪ್ರಭಾತ ನಗರ,ಹೊನ್ನಾವರ ಇವರಿಗೆ ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ ಸಲ್ಲಿಸಿದೆ.
3. ಸಹಾಯಕ ಇಂಜಿನೀಯರ್(ತಾಂ)/,ಶಾಖಾಧಿಕಾರಿಗಳು ನಗರ ಶಾಖೆ/ ಗ್ರಾಮೀಣ 1/ ಗ್ರಾಮೀಣ 2 /ಮರಾಕಲ್ ಹಾಗೂ ಗೋಕರ್ಣ ಶಾಖೆ/ಸಲೆಅ/ಹಿಸ/ಕಡತ

consumer meeting